ಕರ್ನಾಟಕ ಸರ್ಕಾರ

ಜನವರಿ 14, 2016

# ಮಕರ ಸಂಕ್ರಾಂತಿ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಜನವರಿ 14 :**

ಮಕರ ಸಂಕ್ರಾಂತಿಯ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಮಕರ ಸಂಕ್ರಾಂತಿ ಹಬ್ಬವು ನಿಜವಾಗಿಯೂ ಜಾತ್ಯಾತೀತ ಹಬ್ಬಗಳಲ್ಲೊಂದಾಗಿದೆ. ಸುಗ್ಗಿಯ ಹಿಗ್ಗನ್ನು ಬಿಂಬಿಸುವ ಸಂಕ್ರಾಂತಿ ಹಬ್ಬವು ಹೊಸ ಧಾನ್ಯಗಳ ಆಗಮನದ ಸೂಚಕ. ಸಂಕ್ರಾಂತಿಯ ಈ ಸಂದರ್ಭದಲ್ಲಿ ಅವರೆಯ ಸೊಗಡು, ಹುಣಸೆಯ ಸೊಗಸು ಹಾಗೂ ಕಬ್ಬಿನ ಸೊಬಗು ಮಾತ್ರವಲ್ಲದೆ, ಬಹುತೇಕ ಎಲ್ಲಾ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳೂ ಮಾರುಕಟ್ಟೆಯನ್ನು ಹೇರಳವಾಗಿ ಪ್ರವೇಶಿಸುತ್ತವೆ. ಈ ಹಿನ್ನೆಲೆಯಲ್ಲಿ ಸಂಕ್ರಾಂತಿ ಹಬ್ಬವನ್ನು ನಮ್ಮ ರೈತರ ಹಬ್ಬ ಎಂದೇ ಬಣ್ಣಿಸಬಹುದಾಗಿದೆ.

ಬಡವ-ಬಲ್ಲಿದ ಹಾಗೂ ಜಾತಿ-ವರ್ಗಗಳ ಬೇಧವಿಲ್ಲದೆ ಎಳ್ಳು-ಬೆಲ್ಲವ ಮೆಲ್ಲುವ ಸಂಕ್ರಾಂತಿಯ ಸಂಪ್ರದಾಯ ಈ ಋತುಮಾನದಲ್ಲಿ ಕೊರೆಯುವ ಚಳಿಯ ವೈಪರೀತ್ಯದಿಂದ ಹೊರಬರಲು ಎಲ್ಲರಿಗೂ ಅನುವು ಮಾಡಿಕೊಡುತ್ತದೆ. ವರ್ಷವಿಡೀ ತಮ್ಮ ಜೊತೆಗಿದ್ದು ತಮ್ಮೊಂದಿಗೆ ದುಡಿದು ತಮ್ಮ ದುಡಿಮೆಯಲ್ಲಿ ಶ್ರಮದ ಪಾಲುದಾರರಾಗಿ ಸೇವೆಯನ್ನು ಸಲ್ಲಿಸಿದ ರಾಸುಗಳನ್ನು ಸಿಂಗರಿಸಿ ಅವುಗಳೊಂದಿಗೆ ವೈವಿಧ್ಯಮಯ ಕ್ರೀಡೆಗಳಲ್ಲಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ರೈತರು ಸಂಭ್ರಮಿಸುತ್ತಾರೆ.

ಈ ಬಾರಿಯ ಸಂಕ್ರಾಂತಿಯು ನಮ್ಮ ರಾಜ್ಯದ ರೈತರಲ್ಲಿನ ಆತ್ಮ ಬಲ, ಆತ್ಮ ವಿಶ್ವಾಸವನ್ನು ಹಾಗೂ ಆತ್ಮ ಸ್ಥೈರ್ಯವನ್ನು ವೃದ್ಧಿಸಲು ಪ್ರೇರಣೆಯನ್ನು ನೀಡಲಿ ಹಾಗೂ ಸ್ಫೂರ್ತಿಯನ್ನು ಕೊಡಲಿ.

ರಾಜ್ಯದ ಜನತೆಯ, ವಿಶೇಷವಾಗಿ ನಮ್ಮ ರೈತರ ಬಾಳು ಬಂಗಾರವಾಗಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ